ಮೂಲ ದಾವಾ ಸಂಖ್ಯೆ. 107/2019 ಪಿ ಡಬ್ಲ್ಯೂ 1

(ದಿನಾಂಕ 12-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿ ಪರ ಶ್ರೀ ಕೆ ಎಂ ವಕೀಲರಿಂದಃ-

ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ದಾವೆ ದಾಖಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಈ ದಾವೆಯಲ್ಲಿ ಪ್ರತಿವಾದಿಯರು ಏನು ತಕರಾರು ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ನನ್ನ ವಾದಪತ್ರದ ಜೊತೆ ಇರುವ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನನಗೆ ಸಂಬಂಧಿಸಿದ ನನ್ನ ಗುರುತಿನ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಅಸಲುಅರ್ಜಿಯೊಂದಿಗೆ ಹಾಜರುಪಡಿಸಿದ ಪ್ರಮಾಣಪತ್ರದಲ್ಲಿ ರುದ್ರಪ್ಪ ಯಾನೆ ರುದ್ರಮುನಿ ಅಂತಾ ಬರೆಸಿರುತ್ತೇನೆಂದರೆ ಸರಿ. ನನ್ನ ತಿದ್ದುಪಡಿ ವಾದಪತ್ರದಲ್ಲಿ ನನ್ನ ಹೆಸರನ್ನು ನಾನು ರುದ್ರಪ್ಪ ಯಾನೆ ರುದ್ರಮುನಿ ಅಂತಾ ತೋರಿಸಿರುವುದಿಲ್ಲ ರುದ್ರಮುನಿ ಅಂತಾ ಮಾತ್ರ ತೋರಿಸಿರುತ್ತೇನೆಂದರೆ ಸರಿ. ನನ್ನ ಹೆಸರು ರುದ್ರಪ್ಪ ಯಾನೆ ರುದ್ರಮುನಿ ಎಂದು ಇರುತ್ತದಂತಾ ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿ. ನನ್ನ ತಂದೆಯ ಹೆಸರು ಬಣಕಾರ ನಿಂಗಪ್ಪ. ನನ್ನ ತಂದೆಯವರಿಗೆ ಬಣಕಾರ ನಿಂಗಪ್ಪ ಅಂತಾ ಕರೆಯುತ್ತಿದ್ದರಂತಾ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲವೆಂದರೆ ಸರಿ. ನನ್ನ ತಂದೆಗೆ ಲಿಂಗಪ್ಪ ಅಂತಾ ಕರೆಯುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆಯವರ ತಂದೆಯ ಹೆಸರು ಲಿಂಗಪ್ಪ ಅಂತಾ ಇತ್ತು ಎನ್ನುತ್ತಾರೆ. ನನ್ನ ತಿದ್ದುಪಡಿ ವಾದತಪ್ರದ ಶಿರೋನಾಮೆಯಲ್ಲಿ ನನ್ನ ತಂದೆಯ ಹೆಸರು ರುದ್ರಮುನಿ ಬಿನ್ ನಿಂಗಪ್ಪ ಬಣಕಾರ ರುದ್ರಪ್ಪ ಅಂತಾ ಬರೆದಿದ್ದು ಇದೆ ಸದರಿ ರುದ್ರಪ್ಪ ಯಾರು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಿದ್ದುಪಡಿ ವಾದಪತ್ರದಲ್ಲಿರುವಂತಹ ಸಹಿ ನನ್ನದೇ ಆಗಿರುತ್ತದೆ. ಸದರಿ ತಿದ್ದುಪಡಿ ವಾದಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ.

ನನ್ನ ತಂದೆಯವರ ಮೂಲ ಊರು ಗಡಿಮಾವಿನಹಳ್ಳಿ ಎಂದರೆ ಸರಿ. ನಮ್ಮ ಮನೆತನಕ್ಕೆ ಶಿರಿಬಿಯಾರ್ ಮನೆತನ ಅಂತಾ ಕರೆಯುತ್ತಾರೆಂದರೆ ಸರಿ. ನನ್ನ ಅಜ್ಜ ಶಿರಬಿ ಮೂಗಪ್ಪ ಇವರಿಗೆ ನನ್ನ ತಂದೆ ಬಣಕಾರ ನಿಂಗಪ್ಪ, ಮೂಗಬಸಪ್ಪ ಮತ್ತು ಮಲ್ಲಪ್ಪ ಮೂರು ಜನ ಮಕ್ಕಳು ಎಂದರೆ ಸರಿ. ನನ್ನ ತಾಯಿ ರೇವಮ್ಮ ಇವರು ನಮ್ಮ ತಂದೆಗೆ 2 ನೇ ಹೆಂಡತಿ ಎಂದರೆ ಸರಿ. ನಿಂಗಪ್ಪ ಮತ್ತು ರೇವಮ್ಮ ಇವರಿಗೆ ನಾನೇ ಮೊದಲನೇ ಮಗ, ಗಂಗಮ್ಮ ನನ್ನ ಸಹೋದರಿ, ನಂತರ ಸಿದ್ಧಲಿಂಗಪ್ಪ ಮತ್ತು ಸಿದ್ದಮ್ಮ ಸಹೋದರರು ಇರುತ್ತಾರೆಂದರೆ ಸರಿ. ಅವರ ನಂತರ ಚನ್ನಪ್ಪ ಮತ್ತು ನಿಂಗಪ್ಪ ಸಹೋದರರು ಎಂದರೆ ಸರಿ. ಆ ನಂತರ ಹಾಲಮ್ಮ ಮತ್ತು ಅಜ್ಜಪ್ಪ ಅವರ ನಂತರ ನಿಂಗಮ್ಮ ನನ್ನ ಸಹೋದರ ಸಹೋದರಿಯರು.

ಮೂಲ ದಾವಾ ಸಂಖ್ಯೆ. 107/2019 ಪಿ ಡಬ್ಲ್ಯೂ 1

ನನ್ನ ವಾದಪತ್ರದಲ್ಲಿ ನಿಂಗಪ್ಪ, ರೇವಮ್ಮ ಇವರಿಗೆ ನಾನು ಮಗ ಅಂತಾ ಮಾತ್ರ ತೋರಿಸಿದ್ದೇನೆ ಮೇಲೆ ಹೇಳಿದ ನನ್ನ ಸಹೋದರ ಸಹೋದರಿಯರಿಗೆ ಮೇಲೆ ಹೇಳಿದ ವಂಶಾವಳಿಯಲ್ಲಿ ತೋರಿಸಿರುವುದಿಲ್ಲವೆಂದರೆ ಸರಿ. ಸದರಿ ವಂಶವೃಕ್ಷಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದಿರುವಂತಹ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ವೀರಭದ್ರಪ್ಪ ಬಂಡೆಪ್ಪನವರ ಇವರ ತಂದೆಯ ಹೆಸರು ಬಂಡೆಪ್ಪನವರ ರುದ್ರಪ್ಪ ಮತ್ತು ತಾಯಿಯ ಹೆಸರು ಗಂಗಮ್ಮ ಇರುತ್ತದೆ. ನನ್ನ ವಾದಪತ್ರದಲ್ಲಿ ನಾನು ರುದ್ರಪ್ಪ ಇವರ ವಂಶವೃಕ್ಷವನ್ನು ತೋರಿಸಿದ್ದು ಅದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ವಾದಪತ್ರದಲ್ಲಿ ರುದ್ರಪ್ಪ ಇವರ ವಂಶವೃಕ್ಷವನ್ನು ಸೃಷ್ಟಿ ಮಾಡಿಕೊಂಡು ತೋರಿಸಿರುತ್ತೇನೆಂದರೆ ಸರಿಯಲ್ಲ. ನಿಮ್ಮ ತಂದೆಯವರಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದರೆ ಸಾಕ್ಷಿಯು ನಮ್ಮ ತಂದೆಯವರಿಗೆ ಕರಡಿ ನಿಂಗಪ್ಪ ಇವರು ದತ್ತು ಪಡೆದಿದ್ದರು ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ಯಾವ ವರ್ಷ ನಿಮ್ಮ ತಂದೆಯವರಿಗೆ ದತ್ತು ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಸದರಿ ದತ್ತುವನ್ನು ಯಾರು ಕೊಟ್ಟರು ಯಾರು ಸ್ವೀಕರಿಸಿದರೆಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ದತ್ತುಪಡೆದ ಕರಡಿ ನಿಂಗಪ್ಪ ಇವರಿಗೆ ಮೂರು ಜನ ಹೆಣ್ಣುಮಕ್ಕಳು ಅವರೆಂದರೆ ಹಾಲಮ್ಮ, ನಿಂಗಮ್ಮ ಮತ್ತು ಸಿದ್ಧಮ್ಮ ಇರುತ್ತಾರೆ. ನಿಂಗಮ್ಮ ಇವರ ಗಂಡನ ಹೆಸರು ನನಗೆ ಗೊತ್ತಿಲ್ಲ, ಸಿದ್ದಮ್ಮ ಇವರ ಗಂಡನ ಹೆಸರು ಬಸಪ್ಪ ಅವರಿಗೆ ಮಕ್ಕಳಿಲ್ಲ, ಸದರಿ ವಂಶವೃಕ್ಷದಲ್ಲಿ ನಿಂಗಮ್ಮ ಇವರ ಹೆಸರನ್ನು ಸೇರಿಸಲು ನಮ್ಮ ವಕೀಲರಿಗೆ ನಾನು ತಿಳಿಸಿದ್ದೆ ಆದರೆ ಅವರು ಸೇರಿಸಿರುವುದಿಲ್ಲ, ನನ್ನ ವಾದಪತ್ರ ಇಂಗ್ಲೀಷ್ ಭಾಷೆಯಲ್ಲಿದ್ದು ಅದಕ್ಕೆ ಸಹಿ ಮಾಡು ಅಂದ ಮೇರೆಗೆ ನಾನು ಸಹಿ ಮಾಡಿರುತ್ತೇನೆ.

ಸನ್ 1923 ರಂದು ವೀರಭದ್ರಪ್ಪ ಇವರ ತಂದೆ ಯಾರಿಂದ ಯಾವ ಆಸ್ತಿಯನ್ನು ಖರೀದಿಸಿದ್ದರೆಂದು ನನಗೆ ಗೊತ್ತಿಲ್ಲ. 1932 ರಂದು ಯಾವ ಆಸ್ತಿಯನ್ನು ವೀರಭದ್ರಪ್ಪ ಇವರ ತಂದೆ ಖರೀದಿಸಿದ್ದರೆಂದು ನನಗೆ ಗೊತ್ತಿಲ್ಲ. ವೀರಭದ್ರಪ್ಪ ಇವರ ಹೆಸರಿಗೆ ಯಾವ ವರ್ಷ ಮ್ಯುಟೇಶನ್ ಆಯಿತೆನ್ನುವುದು ನನಗೆ ಗೊತ್ತಿಲ್ಲ. ಸದರಿ ಮ್ಯುಟೇಶನ್ ನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲವೆಂದರೆ ಸರಿಯಲ್ಲ. ಹಾಲಮ್ಮ ಇವರು ವೀರಭದ್ರಪ್ಪ ಇವರ ಒಪ್ಪಿಗೆ ಮೇರೆಗೆ ನನಗೆ ಊರಿನ ದೈವಸ್ಥರ ಸಮ್ಮುಖದಲ್ಲಿ ಸನ್ 1981 ರಲ್ಲಿ ಸಾಕುಮಗ ಅಂತಾ

ಪಡೆದುಕೊಂಡರು. ಅದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಬರೆಯಲಾಗಿದೆ ಅದನ್ನು ಯಾರು ಬರೆದರು ಅದಕ್ಕೆ ಸಾಕ್ಷಿದಾರರು ಅಂತಾ ಯಾರು ಸಹಿ ಮಾಡಿದರು ಅಂತಾ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಪ್ರತಿವಾದಿ ನಂ.2 ರಿಂದ 5 ರವರು ನ್ಯಾಯಾಲಯದಿಂದ ಸುಳ್ಳು ಪ್ರಮಾಣಪತ್ರ ಪಡೆದಿರುತ್ತಾರಂತಾ ನನಗೆ ಸನ್ 2017 ರಲ್ಲಿ ಗೊತ್ತಾಯಿತು. ಸುಳ್ಳು ಪ್ರಮಾಣಪತ್ರವನ್ನು ಪಡೆದುಕೊಂಡು ಮ್ಯುಟೇಶನ್ ಮಾಡಿಕೊಂಡಿರುವ ಬಗ್ಗೆ ನೀವು ತಕ್ಷಣದಲ್ಲಿ ಕಂದಾಯ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲವೆಂದರೆ ಸಾಕ್ಷಿಯು ನಾನು ಮೇಲ್ಮನವಿ ಸಲ್ಲಿಸಿದ್ದೆ ಆದರೆ ಅವರು ನ್ಯಾಯಾಲಯಕ್ಕೆ ಹೋಗಲು ತಿಳಿಸಿರುತ್ತಾರೆನ್ನುತ್ತಾರೆ. ನಾವು ಸದರಿ ಮೇಲ್ಮನವಿಯನ್ನು ಎ ಸಿ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ. ಸದರಿ ಮೇಲ್ಮನವಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ವೀರಭದ್ರಪ್ಪ ಬಂಡೆಪ್ಪನವರ್ ಇವರ ಮರಣ ದಾಖಲೆಯ ಬಗ್ಗೆ ಆದ ಆದೇಶವನ್ನು ನಾನು ಸನ್ 2017 ರಲ್ಲಿ ತಾಲ್ಲೂಕು ಕಚೇರಿಯಿಂದ ಪಡೆದಿರುತ್ತೇನೆ. ಸದರಿ ಸುಳ್ಳು ಪ್ರಮಾಣಪತ್ರಕ್ಕಾಗಿ ಪಡೆದ ಆದೇಶವನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ನ್ಯಾಯಾಲಯ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ. ವೀರಭದ್ರಪ್ಪ ಇವರು ಕಂದಗಲ್ ಗ್ರಾಮದಲ್ಲಿ ಸನ್ 1987 ರಲ್ಲಿ ಮರಣ ಹೊಂದಿರುತ್ತಾರೆ. ನಾನು ಸಾಕು ಮಗ ಅಂತಾ ಹೇಳಿ ವೀರಭದ್ರಪ್ಪ ಇವರ ಮರಣಾನಂತರ ಅವರ ಆಸ್ತಿಗಳ ಕುರಿತು ಮ್ಯುಟೇಶನ್ ಮಾಡಿಕೊಳ್ಳಲು ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ಈ ದಾವೆ ದಾಖಲಿಸಿದ ನಂತರದಲ್ಲಿಯೂ ಸಹಾ ಆ ರೀತಿ ಯಾವುದೇ ಮ್ಯುಟೇಶನ್ ಮಾಡಿಕೊಳ್ಳಲು ನಾನು ಅರ್ಜಿಯನ್ನು ಕೊಟ್ಟಿಲ್ಲವೆಂದರೆ ಸರಿಯಲ್ಲ. ಸನ್ 1987 ರಲ್ಲಿ ವೀರಭದ್ರಪ್ಪ ಇವರು ಕಂದಗಲ್ ನಲ್ಲಿ ಮರಣ ಹೊಂದಿರುತ್ತಾರಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವೀರಭದ್ರಪ್ಪ ಇವರ ಮರಣ ದಾಖಲೆಯನ್ನು ಸುಳ್ಳು ಪಡೆದಿದ್ದಾರೆ ಅದನ್ನು ರಹಿತಪಡಿಸಿ ಅಂತಾ ಹೇಳಿ ಈ ನ್ಯಾಯಾಲಯದಲ್ಲಿ ಯಾದೇ ಪ್ರತಿದಾವೆಯನ್ನಾಗಲೀ ಅಥವಾ ಯಾವುದೇ ದೂರನ್ನಾಗಲೀ ಅಥವಾ ಅರ್ಜಿಯನ್ನು ಸಲ್ಲಿಸಿರುವುದಿಲ್ಲವೆಂದರೆ ಸರಿ. ನಾನು ಹೇಳುತ್ತಿರುವುದು ಎಲ್ಲಾ ಸುಳ್ಳು ಇರುವ ಕಾರಣ ನಾನು ಆ ರೀತಿ ಯಾವುದೇ ಪ್ರತಿದಾವೆ, ದೂರು ಅಥವಾ ಅರ್ಜಿಯನ್ನು ಸಲ್ಲಿಸಿಲ್ಲವೆಂದರೆ ಸರಿಯಲ್ಲ.
(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ